# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **267** |
| ಸದಸ್ಯರ ಹೆಸರು | : | **ಕಿಶೋರ್ ಕುಮಾರ್ ಪುತ್ತೂರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | **09.12.2025** |
| ಉತ್ತರಿಸುವ ಸಚಿವರು | : | **ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್ 42(11) ರಂತೆ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿ ಎಷ್ಟು; | ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಸೆಕ್ಷನ್ 42 (11)ರ ಅಧಿನಿಯಮದಲ್ಲಿ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅವಧಿಯು ಚುನಾವಣೆಯ ದಿನಾಂಕದಿಂದ ಮೂವತ್ತು(30) ತಿಂಗಳುಗಳಾಗಿರುತ್ತದೆ. |
| (ಆ) | ಸಂವಿಧಾನಾತ್ಮಕವಾಗಿ ಆಯ್ಕೆಯಾದ ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಮೀಸಲಾತಿ ನಿರ್ಣಯಿಸುವ ಜವಾಬ್ದಾರಿ ಇರುವ ಸರ್ಕಾರ ಸದರಿ ಮೀಸಲಾತಿ ನಿರ್ಣಯಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣವೇನು; ಇದು ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸಿದಂತೆ ಅಲ್ಲವೇ; | ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ 10ನೇ ಅವಧಿಯ ಮೀಸಲಾತಿ ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಕೆಳಕಂಡ ನ್ಯಾಯಾಲಯ ಪ್ರಕರಣಗಳು ಬಾಕಿ ಇದ್ದ ಕಾರಣ ಮೀಸಲಾತಿ ನಿಗದಿಪಡಿಸಲು ಸಾಧ್ಯವಾಗಿರುವುದಿಲ್ಲ.<br><br>1) ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ. ಸಂಖ್ಯೆ:19756/2021ರ ಪ್ರಕರಣದಲ್ಲಿ ದಿನಾಂಕ: 15.12.2021 ರಂದು ನೀಡಿರುವ ತೀರ್ಪು ಹಾಗೂ Manmohan Nagar V/s State of Madhya Pradesh & Others ರವರು ಸಲ್ಲಿಸಿರುವ ಮಿಸಲೇನಿಯಸ್ ಅಪ್ಲಿಕೇಷನ್ ಸಂಖ್ಯೆ:31495/2021ಗೆ ಸಂಬಂಧಿಸಿದಂತೆ ದಿನಾಂಕ:17.12.2021ರಂದು ನೀಡಿರುವ ಆದೇಶದನ್ವಯ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಲ್ಲಿ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಹಾಗೂ ಸದರಿ ಹಿಂದುಳಿದ ವರ್ಗಗಳಿಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಲು ಅಧ್ಯಯನ ನಡೆಸಿ ಶಿಫಾರಸ್ಸು ಮಾಡಲು ನಿವೃತ್ತ ನ್ಯಾಯಾಧೀಶರಾದ ಡಾ॥ ಜಸ್ಟೀಸ್ ಕೆ.ಭಕ್ತವತ್ಸಲ ರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಲಾಗಿತ್ತು. ಆಯೋಗವು ನೀಡಿರುವ ವರದಿಯಲ್ಲಿ ಇದುವರೆಗೂ ಹಿಂದುಳಿದ ವರ್ಗಗಳಿಗೆ ನಿಗಧಿಪಡಿಸಿರುವ ಶೇ.33ರಷ್ಟು ರಾಜಕೀಯ ಮೀಸಲಾತಿಯನ್ನೇ ಅನುಸರಿಸಿರುವಂತೆ ತಿಳಿಸಿರುತ್ತದೆ. ಸದರಿ ವರದಿಯನ್ನು ದಿನಾಂಕ:05.10.2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿದ್ದು, ಆಯೋಗದ ಮೂರು ಶಿಫಾರಸ್ಸುಗಳನ್ನು ಅಂಗೀಕರಿಸಲಾಗಿರುತ್ತದೆ. ಈ ಶಿಫಾರಸ್ಸುಗಳ ಪೈಕಿ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ಘಟಕವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವ್ಯಾಪ್ತಿಯಲ್ಲಿ ನಿರ್ವಹಿಸುವಂತೆ / ಹಸ್ತಾಂತರಿಸುವಂತೆ ಅನುಮೋದನೆ ನೀಡಲಾಗಿರುತ್ತದೆ.<br><br>2) ಪ್ರಸ್ತುತ, ಸರ್ಕಾರದ ಆದೇಶ ಸಂಖ್ಯೆ:ಹಿಂವಕ 114 ಬಿಸಿಎ 2022 (ಭಾಗ-6); ದಿನಾಂಕ:06/07/2024ರನ್ವಯ ನಗರ |
| (ಇ) | 2020ನೇ ವರ್ಷದಲ್ಲಿ ಆಡಳಿತಾವಧಿ ಪ್ರಾರಂಭಿಸಿದ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಪದಾವಧಿ ಮುಗಿದ ನಂತರ ಉಳಿದ 30 ತಿಂಗಳಿಗೆ ಅಧ್ಯಕ್ಷ ಉಪಾಧ್ಯಕ್ಷರ ಮೀಸಲಾತಿಯನ್ನು ನಿರ್ಧರಿಸಲು ಸರ್ಕಾರ ವಿಳಂಬ ಮಾಡಿದ ಕಾರಣ ಸದರಿ ಎರಡನೇ ಅವಧಿಯ 30 ತಿಂಗಳ ಅಧಿಕಾರಾವಧಿ ಮುಕ್ತಾಯಗೊಳಿಸಲು ಕಾಲಾವಕಾಶ ನೀಡಬಹುದಲ್ಲವೇ; ಕಾಲಾವಕಾಶ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು; | |

ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಘಟಕಗಳನ್ನು ನಗರಾಭಿವೃದ್ಧಿ ಇಲಾಖೆಯ ನಿಯಂತ್ರಣದಲ್ಲಿಯೇ ಉಳಿಸಿ, ಪ್ರಸ್ತುತ ಚಾಲ್ತಿಯಲ್ಲಿರುವ ವ್ಯವಸ್ಥೆಯನ್ನು ಮುಂದುವರೆಸುವಂತೆ ಆದೇಶಿಸಲಾಗಿರುತ್ತದೆ.

3) ರಾಜ್ಯದಲ್ಲಿನ ಕೆಲವು ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿಗೆ ಸಂಬಂಧಿಸಿದಂತೆ- ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. (ಸಿವಿಲ್) ಸಂಖ್ಯೆ:7090/2021 ದಾಖಲಾಗಿರುತ್ತದೆ. ಈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ರಾಜ್ಯದಲ್ಲಿರುವ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನಗಳಿಗೆ 1 ರಿಂದ 10ನೇ ಅವಧಿಗೆ ಮೀಸಲಾತಿಯನ್ನು NIC ಮೂಲಕ ಸಾಫ್ಟ್‌ವೇರ್ ಮಾಡಿ ನಿಗದಿಪಡಿಸುವಂತೆ ನಿರ್ದೇಶನ ನೀಡಿರುತ್ತದೆ. ಸದರಿ ನಿರ್ದೇಶನದನ್ವಯ NIC ರವರು ಒದಗಿಸಿರುವ ಮೀಸಲಾತಿಯನ್ನು ಪರಿಶೀಲಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅಫಿಡವಿಟ್ ದಾಖಲಿಸಲಾಗಿರುತ್ತದೆ. ಈ ಪ್ರಕರಣದ ಮುಂದಿನ ವಿಚಾರಣೆ ದಿನಾಂಕ ನಿಗದಿಯಾಗಿರುವುದಿಲ್ಲ.

4) ಈ ಮಧ್ಯೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರು ಪೀಠ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 2448/2024 ನ್ನು ಶ್ರೀ ಸೈಯದ್ ನಸರುಲ್ಲಾ, ಚಿತ್ರದುರ್ಗ ಜಿಲ್ಲೆ ಮತ್ತು ಇತರರು ದಾಖಲಿಸಿದ್ದು, ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಗಳನ್ನು ನಡೆಸಲು ನಿರ್ದೇಶನ ನೀಡುವಂತೆ ಕೋರಿರುತ್ತಾರೆ (ಈ ಪ್ರಕರಣದೊಂದಿಗೆ ರಿಟ್ ಅರ್ಜಿ ಸಂಖ್ಯೆ: 3117/2024 & ರಿಟ್ ಅರ್ಜಿ ಸಂಖ್ಯೆ:3438/2024 ರ ಪ್ರಕರಣಗಳನ್ನು ಲಿಂಕ್ ಮಾಡಲಾಗಿರುತ್ತದೆ).

ರಿಟ್ ಅರ್ಜಿ ಸಂಖ್ಯೆ:2448/2024ರ ಪ್ರಕರಣದಲ್ಲಿ ದಿನಾಂಕ: 27.05.2024 & 10.06.2024ರಂದು ನಡೆದ ವಿಚಾರಣೆಯಲ್ಲಿ ನೀಡಿರುವ ದೈನಂದಿನ ಆದೇಶದಲ್ಲಿ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತ್‌ಗಳಿಗೆ ಅಧ್ಯಕ್ಷರು ಮತ್ತು, ಉಪಾಧ್ಯಕ್ಷರ ಸ್ಥಾನಗಳ ಮೀಸಲಾತಿಯನ್ನು ನಿಗಧಿಪಡಿಸುವಂತೆ ನಿರ್ದೇಶನ ನೀಡಿರುತ್ತದೆ.

ನ್ಯಾಯಾಲಯದ ದೈನಂದಿನ ಆದೇಶದ ಹಿನ್ನೆಲೆಯಲ್ಲಿ 10ನೇ ಅವಧಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ದಿನಾಂಕ:05.08.2024 ರಂದು ಮೀಸಲಾತಿಯನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಅದರಂತೆ ಚುನಾವಣೆಗಳು ಸಹ ನಡೆದಿರುತ್ತದೆ.

ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಸೆಕ್ಷನ್-18ರ ಪ್ರಕಾರ ಕೌನ್ಸಿಲರ್‌ಗಳ ಅವಧಿಯು ಚುನಾವಣೆ ನಡೆದ ನಂತರ ಪ್ರಥಮ ಸಭೆ ನಡೆದ ದಿನಾಂಕದಿಂದ 05 ವರ್ಷಗಳಾಗಿರುತ್ತದೆ. ಆದ್ದರಿಂದ ಸದರಿ ಅವಧಿಯನ್ನು ವಿಸ್ತರಿಸಲು ಅವಕಾಶವಿರುವುದಿಲ್ಲ.

| | | |
|---|---|---|
| (ಈ) | ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಮೊರೆ ಹೋಗಿರುವ ನಗರ ಸ್ಥಳೀಯ ಸಂಸ್ಥೆಗಳು ಎಷ್ಟು; ಅವು ಯಾವುವು; ವಿವರ ಒದಗಿಸುವುದು; | ಪ್ರಸ್ತುತ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿ ಮುಂದುವರೆಸುವಂತೆ ಕೋರಿ ಕರ್ನಾಟಕ ಉಚ್ಛ ನ್ಯಾಯಾಲಯ ಬೆಂಗಳೂರು, ಧಾರವಾಡ ಮತ್ತು ಕಲಬುರ್ಗಿ ಪೀಠಗಳಲ್ಲಿ ದಾಖಲಿಸಲಾಗಿರುವ ಪ್ರಕರಣಗಳ ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| (ಉ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ನೂತನವಾಗಿ ರಚಿಸಲಾದ ಯಾವೆಲ್ಲ ಪಟ್ಟಣ ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಬಾಕಿ ಇವೆ; ಚುನಾವಣೆ ವಿಳಂಬವಾಗಲು ಕಾರಣವೇನು; ಯಾವ ಕಾಲಮಿತಿಯೊಳಗೆ ಚುನಾವಣೆಯನ್ನು ನಡೆಸಲಾಗುವುದು? (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ ಮತ್ತು ಕಿನ್ನಿಗೋಳಿ ಪಟ್ಟಣ ಪಂಚಾಯಿತಿ ಹಾಗೂ ಉಡುಪಿ ಜಿಲ್ಲೆಯ ಬೈಂದೂರು ಪಟ್ಟಣ ಪಂಚಾಯಿತಿಗಳು ನೂತನವಾಗಿ ಪಟ್ಟಣ ಪಂಚಾಯಿತಿಗಳಾಗಿ ರಚನೆಯಾಗಿದ್ದು, ಈ ಪಟ್ಟಣ ಪಂಚಾಯಿತಿಗಳಿಗೆ ದಿನಾಂಕ:11.08.2025 ರಂದು ವಾರ್ಡುವಾರು ಮೀಸಲಾತಿ ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ ಮತ್ತು ಕಿನ್ನಿಗೋಳಿ ಪಟ್ಟಣ ಪಂಚಾಯಿತಿಗಳಿಗೆ ದಿನಾಂಕ:21.12.2025 ರಂದು ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗದಿಂದ ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.<br><br>ಉಡುಪಿ ಜಿಲ್ಲೆಯಲ್ಲಿ ನೂತನವಾಗಿ ರಚಿಸಲಾದ ಬೈಂದೂರು ಪಟ್ಟಣ ಪಂಚಾಯತಿಯ ಕೆಲವು ಪ್ರದೇಶಗಳನ್ನು ಕೈಬಿಟ್ಟು ವ್ಯಾಪ್ತಿ ವಿಸ್ತೀರ್ಣವನ್ನು ಕಡಿತಗೊಳಿಸಲು ಪೌರಾಡಳಿತ ನಿರ್ದೇಶನಾಲಯದಿಂದ ಸ್ವೀಕೃತವಾಗಿರುವ ಪ್ರಸ್ತಾವನೆಯಲ್ಲಿನ ಕೆಲವು ಅಂಶಗಳಿಗೆ ಮಾಹಿತಿ ಒದಗಿಸುವಂತೆ ಪೌರಾಡಳಿತ ನಿರ್ದೇಶಕರಿಗೆ ದಿನಾಂಕ:03.12.2025 ರಂದು ಪತ್ರ ಬರೆಯಲಾಗಿರುತ್ತದೆ. |

**ಸಂಖ್ಯೆ:** ನಅಇ 43 ಎಲ್‌ಸಿಕ್ಯೂ 2025

(ರಹೀಂ ಖಾನ್)
ಪೌರಾಡಳಿತ ಮತ್ತು ಹಜ್ ಸಚಿವರು

| | | | |
|---|---|---|---|
| 43. | 31883/2025 | Pavagada TMC | Pending |
| 44. | 27834/2025 | Udupi CMC | Pending |
| 45. | 27991/2025 | Biruru TMC | Pending |
| 46. | 31566/2025 | Koratagere TP | Pending |
| 47. | 31880/2025 | Narasimrajpur TP | Pending |
| 48. | 31974/2025 | K R Pete CMC | Pending |
| 49. | 32013/2025 | T Narasipura TMC | Pending |
| 50. | 32045/2025 | Periyapattana TMC | Pending |
| 51. | 31468/2025 | Gubbi TP | Pending |
| 52. | 31651/2025 | Hunasuru CMC | Pending |
| 53. | 31705/2025 | Bangarpete TMC | Pending |
| 54. | 31995/2025 | K.R.Nagara TMC | Pending |
| 55. | 32290/2025 | Arkalgud TP | Pending |
| 56. | 32500/2025 | Robertsonpet CMC | Pending |
| 57. | 32511/2025 | Somavarapete TMC | Pending |
| 58. | 32537/2025 | Mulki TP | Pending |
| 59. | 32999/2025 | Sullia TP | Pending |
| 60. | 23735/2025 | Belthangady TP | Pending |
| 61. | 32320/2025 | Koppa TP | Pending |
| 62. | 32327/2025 | Alur TP | Pending |
| 63. | 32429/2025 | Sagar TP | Pending |
| 64. | 32473/2025 | Channarayapatna TMC | Pending |
| 65. | 32389/2025 | Magadi CMC | Pending |
| 66. | 32524/2025 | Chamarajanagara CMC | Pending |
| 67. | 32527/2025 | Devanahalli TMC | Pending |
| 68. | 32560/2025 | Kundapura CMC | Pending |
| 69. | 31183/2025 | Holalkere CMC | Pending |
| 70. | 32094/2025 | Koppa TP | Pending |
| 71. | 32730/2025 | Kanakapura TMC | Pending |
| 72. | 32767/2025 | Shiralkoppa TMC | Pending |
| 73. | 33048/2025 | Chikkanayakanahalli TMC | Pending |
| 74. | 33544/2025 | Kunigal TMC | Pending |
| 75. | 33577/205 | Hannur TP | Pending |
| **Dharwad Bench** | | | |
| 1. | 108100/2025 | Sandur TP | Pending |
| 2. | 1078279/2025 | Haveri CMC | Pending |
| 3. | 107755/2025 | Koppal CMC | Pending |
| 4. | 107767/2025 | Ramdurga CMC | Pending |
| **Kalaburgi Bench** | | | |
| 1. | 202758/2025 | Chincholi TMC | Pending |
| 2. | 202705/2025 | Chincholi TMC | Pending |
| 3. | 202811/2025 | Shorapura CMC | Pending |
| 4. | 202686/2025 | Lingasurura | Pending |
| 5. | 202691/2025 | Mudgagal TMC | Pending |
| 6. | 202910/2025 | Raichur CMC | Pending |

# ಅನುಬಂಧ

| Bengaluru Bench | | | |
|---|---|---|---|
| Sl. No. | WP No. | Name of the ULB's | Remarks |
| 1. | 27887/2025 | Kolar CMC | Pending |
| 2. | 26543/2025 | Bannur TMC | Pending |
| 3. | 27497/2025 | Sringeri TP | Pending |
| 4. | 27621/2025 | Kadur TMC | Pending |
| 5. | 27918/2025 | Mudageri TMC | Pending |
| 6. | 29209/2025 | Hassan Corporation | Pending |
| 7. | 29501/2025 | Hiriyur CMC | Pending |
| 8. | 30193/2025 | Hiriyur CMC | Pending |
| 9. | 30594/2025 | Holenarasipura TMC | Pending |
| 10. | 30595/2025 | Chikkaballapura CMC | Pending |
| 11. | 30596/2025 | Malavalli TMC | Pending |
| 12. | 30605/2025 | Mulabagilu CMC | Pending |
| 13. | 30627/2025 | Challakere CMC | Pending |
| 14. | 30675/2025 | Channagiri TMC | Pending |
| 15. | 30782/2025 | Soraba TMC | Pending |
| 16. | 30993/2025 | Hiriyur CMC | Pending |
| 17. | 31032/2025 | Virajpete TP | Pending |
| 18. | 31150/2025 | Bellur TP | Pending |
| 19. | 31334/2025 | Pandavapura TMC | Pending |
| 20. | 27589/2025 | Mandya CMC | Pending |
| 21. | 27401/2025 | Nagamangala TMC | Pending |
| 22. | 31300/2025 | Hoskote CMC | Pending |
| 23. | 29992/2025 | Chitradurga CMC | Pending |
| 24. | 31871/2025 | Kushal Nagara TMC | Pending |
| 25. | 31782/2025 | Madugiri TMC | Pending |
| 26. | 31838/2025 | Turuvekere TP | Pending |
| 27. | 31847/2025 | Srirangapatna TMC | Pending |
| 28. | 31862/2025 | Hosanagara TP | Pending |
| 29. | 31873/2025 | Gundlupete CMC | Pending |
| 30. | 31875/2025 | Arsikere CMC | Pending |
| 31. | 31876/2025 | Jagaluru TP | Pending |
| 32. | 31882/2025 | Sakaleshpura TMC | Pending |
| 33. | 31884/2025 | Molakalmuru TP | Pending |
| 34. | 31497/2025 | Moodabidari TMC | Pending |
| 35. | 31466/2025 | Puttur CMC | Pending |
| 36. | 31430/2025 | Hassan Corporation | Pending |
| 37. | 31343/2025 | Malur CMC | Pending |
| 38. | 31338/2025 | Kollegala CMC | Pending |
| 39. | 29199/2025 | Gowribidanuru CMC | Pending |
| 40. | 25648/2025 | Shikaripura TMC | Pending |
| 41. | 25347/2025 | Honnali TMC | Pending |
| 42. | 22473/2025 | Kadur TMC | Pending |